**ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು**
**(3ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ)**
**ಎಂ.ವಿ.ಸಿ ನಂ.8041/2023**

| | |
|---|---|
| **ಹೆಸರು** | ಗೀರೀಶ್ ಕುಮಾರ್ ಎಸ್ |
| **ತಂದೆಯ ಹೆಸರು** | ಶ್ರೀನಿವಾಸ್ |
| **ವಯಸ್ಸು** | 43 ವರ್ಷ |
| **ಉದ್ಯೋಗ** | ಪಿ.ಐ. ಬಾಣಸವಾಡಿ ಸಂಚಾರ ಪಿ.ಎಸ್. ಬೆಂಗಳೂರು |
| **ವಾಸ ಸ್ಥಳ** | ರಾಜಾಜಿನಗರ ಬೆಂಗಳೂರು |

**ಸಾಕ್ಷಿಗೆ ದಿನಾಂಕ 26-02-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ **ವಿಚಾರಣೆ: ಅರ್ಜಿದಾರರ ಪರ ಶ್ರೀ ಕೆ ಹೆಚ್ ವಕೀಲರಿಂದ:**

ನಾನು ಈ ದಿನ ನ್ಯಾಯಾಲಯದಿಂದ ಪಡೆದ ಸಮನ್ಸ್ ಗೆ ಪ್ರತಿಯಾಗಿ ನ್ಯಾಯಲಯಕ್ಕೆ ಹಾಜರಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನಾನು ಮಲ್ಲೇಶ್ವರಂ ಪೊಲೀಸ್ ಠಾಣೆಯಲ್ಲಿ ಮಾರ್ಚ್-2021 ರಿಂದ ಆಗಸ್ಟ್-2022 ರವೆರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ಮೇ-2021 ರಲ್ಲಿ ರಾಜಾಜಿನಗರ ಸಂಚಾರ ಪೋಲೀಸ್ ಠಾಣೆಯ ಪ್ರಭಾರ ಪಡೆದುಕೊಂಡಿದ್ದು, ಸದರಿ ಠಾಣೆಗೆ ಸಂಬಂಧಿಸಿದ ಮೊ.30/2021 ರ ಪ್ರಾಥಮಿಕ ತನಿಖೆ ಮಾಡಿರುತ್ತೇನೆ. ನಾನು ಸದರಿ ಪ್ರಕರಣದಲ್ಲಿ ಶವ ಪಂಚನಾಮೆಯನ್ನು ಎಂ ಎಸ್ ರಾಮಯ್ಯ ಆಸ್ಪತ್ರೆಯಲ್ಲಿ ಮಾಡಿರುತ್ತೇನೆ ಹಾಗೂ ಸ್ಥಳ ಮಹಜರು ತಯಾರಿಸಿರುತ್ತೇನೆ ಮತ್ತು ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅಪಘಾತದಲ್ಲಿ ಒಳಗೊಂಡ ವಾಹನಗಳನ್ನು ಅಮಾನತು ಪಡಿಸಿಕೊಂಡಿರುತ್ತೇನೆ. ಅಪಘಾತ ಸ್ಥಳದ ಸಮೀಪದಲ್ಲಿರುವ ಸೂರ್ಯ ಬೇಕರಿಯ ಸಿಸಿಟಿವಿಯ ದೃಶ್ಯಾವಳಿಗಳನ್ನು ಸಂಗ್ರಹಿಸಿರುತ್ತೇನೆ. ಶವ ಪರೀಕ್ಷಾ ವರದಿಯನ್ನು ಸ್ವೀಕರಿಸಿರುತ್ತೇನೆ.

ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನಮತಿ ಕೋರಿದ್ದು, ಅನುಮತಿ ನೀಡಲಾಗಿರುತ್ತದೆ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಕೆ ಎಚ್ ವಕೀಲರಿಂದಃ**

2021 ರಲ್ಲಿ ಕೋವಿಡ್ ಸಂಕ್ರಾಮಿಕ ರೋಗ ತಡೆಗಟ್ಟುವ ಸಲುವಾಗಿ ರಾಜ್ಯ ಸರ್ಕಾರ ಕಾಲ ಕಾಲಕ್ಕೆ ಸಂಚಾರ ನಿಯಂತ್ರಣ ಆದೇಶಗಳನ್ನು ಹೊರಡಿಸಿತ್ತು ಎಂದರೆ ಸರಿ. ನಿಪಿ.16 ಮತ್ತು 17 ರಂತೆ ಸಂಚಾರ ನಿಯಂತ್ರಣ ನಿಯಮಗಳು ಜಾರಿಯಲ್ಲಿದ್ದವು ಎಂದರೆ ಸರಿ. ಕೋವಿಡ್ ಸಮಯದಲ್ಲಿ ಜನ ಮತ್ತು ವಾಹನವನ್ನು ನಿಯಂತ್ರಿಸುವ ಸಲುವಾಗಿ ಬೆಂಗಳೂರಿನ ಹಲವು ದ್ವಿಮುಖ ರಸ್ತೆಗಳನ್ನು ಏಕ ಮುಖ ರಸ್ತೆಗಳನ್ನಾಗಿ ಪರಿವರ್ತಿಸಿದ್ದೇವು ಎಂದರೆ ಸರಿಯಲ್ಲ. ಅಪಘಾತ ನಡೆದ ರಸ್ತೆಯನ್ನು ಕೆಲವು ಸಮಯಗಳ ಕಾಲ ಏಕ ಮುಖ ರಸ್ತೆಯನ್ನಾಗಿ ಪರಿವರ್ತಿಸಿದ್ದೇವು ಎಂದರೆ ಸಂದರ್ಭಕ್ಕಾನುಸಾರವಾಗಿ ಪರಿವರ್ತಿಸಿರುತ್ತೇವೆ. ಅಪಘಾತದ ದಿನದಂದು ಕೋವಿಡ್ ನಿಯಮಗಳನ್ವಯ ಜನದಟ್ಟಣೆ ಮತ್ತು ವಾಹನ ದಟ್ಟಣೆಗಳ ಆಧಾರದ ಮೇಲೆ ಅಪಘಾತ ನಡೆದ ರಸ್ತೆಯನ್ನು ಏಕ ಮುಖ ರಸ್ತೆಯನ್ನಾಗಿ ಪರಿವರ್ತಿಸಿದ್ದೇವು ಎಂದರೆ ಸ್ಥಳೀಯ ಪೊಲೀಸರು ತಮ್ಮ ವಿವೇಚನೆ ಅನುಸಾರವಾಗಿ ಅಪಘಾತ ನಡೆದ ರಸ್ತೆಯನ್ನು ಏಕ ಮುಖ ರಸ್ತೆಯನ್ನಾಗಿ ಪರಿವರ್ತಿಸಿರಬಹುದು ಅಥವಾ ಪರಿವರ್ತಿಸದೇ ಇರಬಹುದು.

ಪಾಟೀ ಸವಾಲು : 1 ನೇ ಮತ್ತು 2 ನೇ ಎದುರುದಾರರನ್ನು ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು, ಗೈರುಹಾಜರಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು-ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**